ವಾರದ ಪತ್ರ

## ಧಾರಾವಾಹಿಯೆಂದರೆ 'ಮಗಳು..'

ಧಾರಾವಾಹಿಗಳೆಂದರೆ (ಟಿ. ಎನ್ ) ಸೀತಾರಾಮರದಯ್ಯಾ ! ಮಾಯಾಮೃಗದಿಂದ ಮಗಳು ಜಾನಕಿವರೆಗೆ ಜನ ಮನವ ಸೂರೆಗೊಂಬ ಸೂತ್ರವೆಲ್ಲವನರಿತು ಪಾತ್ರಗಳಿಗೆ ಜೀವ ತುಂಬಿ ಕುತೂಹಲವ ಕಾಪಿಡುತ ಕತೆಯನು ಲಂಬಿಸದೆ ನಿತ್ಯವೂ ನಿರೀಕ್ಷಿಸುವಂಥ ಧಾರಾವಾಹಿಗಳ ಹೆಣೆಯುವ ಸೀತಾರಾಮರಿವರಯ್ಯ

–ಕೆ.ವಿ. ಲಕ್ಷ್ಮೀನಾರಾಯಣ, ಬೆಂಗಳೂರು

## ಆಡಂಬರವೇಕೆ?

ನಮ್ಮ ಕನ್ನಡ ಭಾಷೆಯ ಸುಮಾರು 20– 30 ಚಾನೆಲ್‌ಗಳು ಪ್ರಸಾರವಾಗುತ್ತಿದ್ದು, ಅದರಲ್ಲಿ ಸುಮಾರು ಅರ್ಧದಷ್ಟು ವಾರ್ತೆಗಳನ್ನು ಬಿತ್ತರಿಸುತ್ತವೆ. ವಾರ್ತೆಗಳ ಚಾನೆಲ್ ಬಿಟ್ಟರೆ ಇತರೆ ಚಾನೆಲ್‌ಗಳು ದಿನಾ ಹತ್ತಾರು ಧಾರಾವಾಹಿಗಳನ್ನು ಪ್ರಸಾರ ಮಾಡುತ್ತವೆ. ಅದರಲ್ಲಿ ಕೆಲವು ಧಾರಾವಾಹಿಗಳು ಉತ್ತಮವಾಗಿದ್ದು ಪ್ರೇಕ್ಷಕರ ಮನಸನ್ನು ಗೆದ್ದಿರುತ್ತವೆ. ಆದರೆ, ಪ್ರತಿಶತ 80 ರಷ್ಟು ಧಾರಾವಾಹಿಗಳು ಬರೀ ಶ್ರೀಮಂತಿಕೆ, ಆಡಂಬರ ಹಾಗೂ ಹೆಣ್ಣಿನ ಅತೀ ವೈಭವೀಕರಣವನ್ನು ಪ್ರಸಾರ ಮಾಡುತ್ತವೆ. ಆದರೆ, ಈ ತರಹದ ಆಡಂಬರಗಳು ಧಾರಾವಾಹಿಯಲ್ಲಿ ಬರುವ ಸನ್ನಿವೇಶಗಳಿಗೆ ಹೊಂದುವುದೇ ಇಲ್ಲ. ದುಃಖದ ಸನ್ನಿವೇಶಗಳು ಹಾಗೂ ರಾತ್ರಿ ಮಲಗುವ ಸಮಯಗಳಲ್ಲೂ ಸಹ ಮನೆಯ ಹೆಣ್ಣುಮಕ್ಕಳು ಯಾವುದೋ ಸಮಾರಂಭಕ್ಕೆ ಹೋಗುವ ಹಾಗೆ ಶೃಂಗಾರ ಮಾಡಿಕೊಂಡಿರುವುದನ್ನು ತೋರಿಸುವುದು ಅಷ್ಟು ಸಮಂಜಸವೆನಿಸುವುದಿಲ್ಲ. ಆದ್ದರಿಂದ ಚಾನೆಲ್ ಹಾಗೂ ಧಾರಾವಾಹಿಗಳಿಗೆ ಸಂಬಂಧಪಟ್ಟವರಲ್ಲಿ ನಮ್ಮದೊಂದು ಚಿಕ್ಕ ಕೋರಿಕೆ. ಇಂತಹ ಸನ್ನಿವೇಶಗಳನ್ನು ಚಿತ್ರಿಸುವಾಗ ಆ ಸನ್ನಿವೇಶಕ್ಕೆ ತಕ್ಕಂತೆ ಚಿತ್ರೀಕರಣ ಮಾಡಿದರೆ ನೋಡುಗರಿಗೆ ಧಾರಾವಾಹಿಗಳಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ಹಾಗೂ ಉತ್ಸಾಹ ಬರಬಹುದು.

– ಶಾಂತಾ, ಶೈಲಾ, ಲಕ್ಷ್ಮಿ, ಕೃಷ್ಣಮೂರ್ತಿ, ಕುಮಾರಸ್ವಾಮಿ, ಬೆಂಗಳೂರು

## ಜಾಳುಜಾಳಾದ ಕಥಾವಸ್ತು

ನಾನು ಟೀವಿ ನೋಡಲಾರಂಭಿಸಿ ಒಂದು ದಶಕಕ್ಕೂ ಹೆಚ್ಚು ಸಮಯವಾಗಿದೆ. ಕಾಲಕ್ಕೆ ತಕ್ಕಂತೆ ಅಭಿರುಚಿ ಬದಲಾಗುವುದು ಸಹಜ. ಆದರೆ, ಕೆಲವು ಶಾಶ್ವತವಾದ ಮೌಲ್ಯಗಳಿರುತ್ತವಲ್ಲ? ಕನ್ನಡ ಸುದ್ದಿ ವಾಹಿನಿಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದೇ ಅನಗತ್ಯವೆನಿಸುತ್ತದೆ. ಯಾರದೋ ಒಳಬಟ್ಟೆಯನ್ನು ಸಾರ್ವಜನಿಕವಾಗಿ ತೊಳೆಯುವ ಕೆಲಸ ಇಲ್ಲಿ ದಿನಾಲೂ ಸಾಗುತ್ತಲೇ ಇರುತ್ತದೆ, ಇದು ಅವರ ಬ್ರೆಡ್ ಮತ್ತು ಬೆಣ್ಣೆ ಎಂದುಕೊಳ್ಳೋಣ. ಆದರೆ ನಿತ್ಯ ಧಾರಾವಾಹಿಗಳ ಹಿಂಸೆ ತಡೆಯುವುದಕ್ಕೆ ಕಷ್ಟವಾಗುತ್ತದೆ. ಜಾಳುಜಾಳಾದ ಕಥಾ ವಸ್ತು, ಎಳೆದಾಡುವ ಕಥೆಗಳು, ಹಾಸ್ಯವೇ ಅಲ್ಲದ ಸಂಭಾಷಣೆ ಇತ್ಯಾದಿ ಟಿವಿಯನ್ನು ಆಫ್ ಮಾಡೋಣ ಎನಿಸುತ್ತದೆ.

ಆದರೆ 'ಪಾಪ ಪಾಂಡು' ಇಂದಿಗೂ ಮನರಂಜಿಸುತ್ತಿದೆ. ಪೌರಾಣಿಕ ಧಾರಾವಾಹಿಗಳಿಗೆ ಕನ್ನಡ ವಾಹಿನಿಗಳು ಇನ್ನೂ ಸಿದ್ಧವಾಗಿಲ್ಲ ಎಂದರೆ ಅತಿಶಯೋಕ್ತಿಯಲ್ಲ.

–ಪದ್ಮನಾಭ ರಾವ್, ಬೆಂಗಳೂರು

## ಪೇಲವ ಧಾರಾವಾಹಿ

ಉತ್ತಮ ಅಭಿರುಚಿಯ ಸತ್ವಯುತ ನಿರ್ದೇಶನದ 'ಮಗಳು ಜಾನಕಿ' ಎಲ್ಲರ ಮನಸೆಳೆದಿದೆ. ಪ್ರಾರಂಭದಲ್ಲಿ ಕುತೂಹಲಕರವಾಗಿ, ಅನೇಕ ತಿರುವುಗಳೊಂದಿಗೆ ರೋಚಕವಾಗಿ ಮುಂದುವರಿಯುತ್ತಿದ್ದ ಕಥೆ ಈಗೇಕೋ ಪೇಲವವಾಗುತ್ತಿದೆ. ಅದರಲ್ಲೂ ಜಾನಕಿ, ರಶ್ಮಿ, ಹಾಗೂ ಸ್ವತಃ ಸಿ ಎಸ್ಪಿ ಯವರೇ ತುಂಬಾ ಸೋತಂತೆ ಕಾಣುತ್ತಾರೆ. ಸಿಎಸ್ಪಿ ಯವರ ಅಭಿನಯ ಕೆಲವು ಸನ್ನಿವೇಶಗಳಲ್ಲಿ ಹೃದಯ ಸ್ಪರ್ಶಿಯಾದರೂ ರಶ್ಮಿ, ಹಾಗೂ ಜಾನಕಿ ನಿರಾಸೆ ಹುಟ್ಟಿಸುತ್ತಿದ್ದಾರೆ. ಮಾತುಗಳು ತುಂಬಾ ನಿಧಾನ. ಒಬ್ಬರ ಮುಖ ಇನ್ನೊಬ್ಬರು ನೋಡುತ್ತಾ ಇರುವುದು ವೀಕ್ಷಕರ ತಾಳ್ಮೆ ಪರೀಕ್ಷಿಸುವಂತಿದೆ. ಧಾರಾವಾಹಿಯಲ್ಲಿ ಲವಲವಿಕೆಯಿಂದ ನಟಿಸುವವರು ಭಾರ್ಗಿ, ನಿರಂಜನ ಮತ್ತು ಚಂಚಲಾ ಮಾತ್ರ. ಶ್ಯಾಮಲತ್ತೆಯ ಪೆದ್ದುತನ ಮಿತಿಮೀರುತ್ತಿದೆ.

ಈ ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಿದರೆ ಮಗಳು ಜಾನಕಿ ಎಲ್ಲರ ಮನಮೆಚ್ಚಿದ ಧಾರಾವಾಹಿಯಾಗುವುದರಲ್ಲಿ ಸಂಶಯವಿಲ್ಲ.

–ಗೀತಾ ನೆಲ್ಲೀಕಾಯಿ, ಬೆಂಗಳೂರು; ಪವನ್, ಮೈಸೂರು

## ಮನರಂಜನೆಯ ಪಾಂಡು

'ಪಾಪ ಪಾಂಡು' ಹಾಸ್ಯ ಹಾಗೂ ಮನರಂಜನೆ ನೀಡುತ್ತಿರುವ ಜನಪ್ರಿಯ ಧಾರಾವಾಹಿ. ಪ್ರತಿ ದಿನವೂ ಹೊಸ ವಸ್ತು ಆಯ್ಕೆ ಮಾಡಿಕೊಂಡು ಸಂಚಿಕೆ ನೀಡುತ್ತಿರುವುದು, ಸಮಾಜದಲ್ಲಿ ನಡೆಯುವ ವಿದ್ಯಮಾನಗಳನ್ನು ಆರಿಸಿಕೊಂಡು ಹಾಸ್ಯ ಲೇಪನ ಹಚ್ಚಿ ಪ್ರಸ್ತುತಪಡಿಸುವುದು. ಈ ಹಿಂದೆ ಇದೇ ಧಾರಾವಾಹಿಯಲ್ಲಿ ನಟಿಸಿ ಪ್ರಸಿದ್ಧಿ ಪಡೆದಿದ್ದ ನಟ–ನಟಿಯರನ್ನೇ ಸೇರಿಸಿಕೊಂಡು ಸಂಚಿಕೆಗಳನ್ನು ನಿರ್ಮಾಣ ಮಾಡುತ್ತಿರುವುದು ಖುಷಿ ಕೊಟ್ಟಿದೆ. ಈ ಧಾರಾವಾಹಿಯ ಜೀವಾಳವೆಂದರೆ ಸಂಭಾಷಣೆ ಮತ್ತು ಸಂದರ್ಭಕ್ಕೆ ತಕ್ಕ ಹಾಗೆ ಪಾತ್ರಗಳು ಪ್ರಸ್ತುತಪಡಿಸುತ್ತಿರುವ ರೀತಿ.

– ಮೀನಾಕ್ಷಿ ಕೆ.ರಾಮಗುಂಡಿ, ಬೈಲಹೊಂಗಲ

## ಪ್ರಸಾರಕ್ಕೆ ಕಡಿವಾಣವಿರಲಿ

ಇತ್ತೀಚೆಗೆ ನಡೆದ ಉಪಚುನಾವಣೆಯನ್ನು ಸುದ್ದಿ ವಾಹಿನಿಗಳು ಯುದ್ಧಕಾಂಡ, ಮಹಾಪರ್ವ, ಮಹಾಸಮರವೆಂದು ಬಣ್ಣಿಸಿದ್ದು, ರಾಜಕೀಯ ನಾಯಕರು ಹೇಳಿದ ಅಸಭ್ಯ ಮಾತುಗಳನ್ನು ಪ್ರಸಾರ ಮಾಡಿ ಪರಸ್ಪರ ಉದ್ರೇಕಿಸಿದ್ದು ಸರಿಯಲ್ಲ. ರಾಜಕಾರಣಿಗಳೂ ಅಷ್ಟೆ, ಮಾತನಾಡುವಾಗ ವಿಚಾರ ಮಾಡಿ ಮಾತನಾಡಬೇಕು.

–ಸದಾನಂದ ಹೆಗಡೆಕಟ್ಟೆ, ಮೂಡುಬಿದಿರೆ

## ಚೂಟಿ ಮಕ್ಕಳು

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ದಶಾವತಾರ', 'ಡ್ರಾಮಾ' 'ಸರಿಗಮಪ' ಕಾರ್ಯಕ್ರಮಗಳು ಚೆನ್ನಾಗಿ ಮೂಡಿಬರುತ್ತಿವೆ. ಡ್ರಾಮಾ ಮಕ್ಕಳು ಒಬ್ಬರಿಗಿಂತ ಒಬ್ಬರು ಚೂಟಿಯಾಗಿದ್ದಾರೆ.

–ವಿಜಯಕುಮಾರಿ, ಬೆಂಗಳೂರು

## ಕೋಟಿ ಹೇಳಿದ ಕಥೆ

ಸರಳ ಜೀವನ'ದಲ್ಲಿ ಪ್ರತಿ ಶನಿವಾರ ಹಾಗು ಭಾನುವಾರ ರಾತ್ರಿ 9.30ಕ್ಕೆ ಪ್ರಸಾರಣಗೊಳ್ಳುತ್ತಿರುವ 'ಕೋಟಿ ಹೇಳಿದ ಕಥೆ' ಕಾರ್ಯಕ್ರಮ ಐತಿಹ್ಯದತ್ತ ಕೊಂಡೊಯ್ಯುತ್ತ ಕೇಳಿರದ ನೋಡಿರದ ಕೋಟೆಗಳ ದೃಶ್ಯಕಾವ್ಯವನ್ನು ರೋಚಕವಾಗಿ ಕಟ್ಟಿಕೊಡುತ್ತಿರುವುದು ಮೆಚ್ಚತ್ತ ನಿಜಕ್ಕೂ ಅತ್ಯುತ್ತಮವಾದ ವಿಭಿನ್ನತೆಯ ಈ ಕಾರ್ಯಕ್ರಮ ವೀಕ್ಷಕರನ್ನು ತನ್ನತ್ತ ಸೆಳೆಯುತ್ತಿದೆ.

–ಪೂರ್ಣಿಮಾ ಮೂರ್ತಿ ಬೆಂಗಳೂರು.

## ಈ ರೀತಿಯ ಗೊಂದಲವೇಕೆ ?

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುವ ಅಗ್ನಿಸಾಕ್ಷಿಯಲ್ಲಿ ಹಿಂದೆ ಒಮ್ಮೆ ಆಯುಷಿಗೆ ಮಾತು ಬರಲು ಆಪರೇಷನ್ ಮಾಡಿದರೆ ಸಕ್ಸಸ್ ಆಗುವುದಿಲ್ಲ ಎಂದು ಡಾಕ್ಟರ್ ಹೇಳಿದ್ದರು. ನಂತರ ಆಯುಷಿ ಖುಷಿ ಬದಲಾಗಿ ಆಯುಷಿ ತಾಯಿ ರಾಧಿಕಾ ಜೊತೆ ಸೇರುತ್ತಾಳೆ .ಆಗ ರಾಧಿಕಾ ಡಾಕ್ಟರ್ ಹತ್ತಿರ ತೋರಿಸಿದಾಗ ಆಪರೇಷನ್ ಮಾಡಿದರೆ ಮಾತನಾಡಲು ಬರುತ್ತದೆ. ಆಪರೇಷನ್ ಸಕ್ಸಸ್ ಆಗುತ್ತದೆ ಎನ್ನುತ್ತಾರೆ ಡಾಕ್ಟರ್. ಏನಿದು? ನಿರ್ದೇಶಕರು ವೀಕ್ಷಕರನ್ನು ಬಕ್ರಾ ಮಾಡುತ್ತಿದ್ದಾರೆಯೇ?

–ಮಾಧವಿಲತಾ ಚಿಪ್ಪಳಕಟ್ಟೆ